ಭೇಟಿಯಾಗಲಿಕ್ಕೆ ಇಂದಿನಂತೇ ಸಂಭ್ರಮದಿಂದ ಬಟ್ಟೆಯ ಜೊತೆ ಹೃದಯವನ್ನೂ ಒಪ್ಪ ಓರಣ ಮಾಡಿಕೊಂಡು ತಯಾರಾಗಿ ಹೋಗಿದ್ದೆ...

ಐರನ್ ಮಾಡಿದ ಬಟ್ಟೆಯಿಂದ ಇಸ್ತ್ರಿ ಮಾಯವಾದಷ್ಟೇ ಬೇಗನೆ ಆ ಪ್ರೀತಿಯೂ ಕಾಣೆಯಾಗಿತ್ತು. ನನಗೆ ಯಾವುದರ ಭಯವಿತ್ತೋ ಅದೇ ಆಗಿತ್ತು. ಕಲ್ಪನೆಗಳೊಳಗೆ ನನ್ನನ್ನು ಪ್ರಬುದ್ಧ ಹುಡುಗನಂತೆ, ರೊಮ್ಯಾಂಟಿಕ್ ನಾಯಕನಂತೆ ಕಲ್ಪಿಸಿಕೊಂಡಿದ್ದ ಸುಮಾಳಿಗೆ ನಿಜದಲ್ಲಿನ ನನ್ನ ಹ್ಯಾಪ ಮೂತಿ, ಹಿಂಜರಿಕೆಯ ಸ್ವಭಾವ, ಹೆದರಿದ ನಡವಳಿಕೆಗಳನ್ನು ನೋಡಿ ನಿರಾಸೆಯಾಗಿತ್ತು. ಭೇಟಿಯಾದ ಮರುದಿನದಿಂದಲೇ ಅವಳ ಪ್ರೀತಿ ಗೇರ್ ಬದಲಾಯಿಸಿತ್ತು. ನನ್ನಿಂದ ಒಂದೊಂದೇ ಹೆಜ್ಜೆ ವಿಮುಖವಾಗುತ್ತ ಹೋಗಿ ಕೊನೆಗೆ ಸೋಶಿಯಲ್ ಮೀಡಿಯಾದಲ್ಲಿ ಸಿಕ್ಕ ನನಗಿಂತ ಸುಂದರನೂ, ಕ್ರಿಯಾಶೀಲನೂ, ಉತ್ತಮ ಹವ್ಯಾಸವುಳ್ಳವನೂ ಆದ ಮಂಜುನಾಥನ ಒಡನಾಟದಲ್ಲಿ ಲೀನವಾಗಿ ನನ್ನಿಂದ ಶಾಶ್ವತವಾಗಿ ದೂರಾಗಿದ್ದಳು ಸುಮಾ. ಅವಳು ಹರಿಸಿಹೋದ ಪ್ರೇಮದ ಅವಶೇಷಗಳ ಹೊರತಾಗಿ ನನ್ನೊಳಗೆ ಉಳಿದ ಒಂದೇ ಒಂದು ಸಂಗತಿಯೆಂದರೆ:

ಅಂತ್ಯವಿಲ್ಲದ ಅಗಾಧ ನೋವು ಹಾಗೂ ಪಶ್ಚಾತ್ತಾಪ.

ಈ ಭೇಟಿಯೂ ಅಂಥದೇ ಮತ್ತೊಂದು ಪರ್ಯಾವಸಾನದ ಮುನ್ನುಡಿಯೇ?

ಏಕೋ ಜೀವ ನಡುಗಿತು.

★★★

ಪ್ರೇಮಿಗಳೇ ತುಂಬಿದ್ದ ಡೋಮಿನೋಸ್‌ನೊಳಗಿನ ಖಾಲಿ ಕುರ್ಚಿಯೊಂದರಲ್ಲಿ ಕುಳಿತು ವಾಚು ನೋಡಿಕೊಂಡೆ. ವೈಶಾಲಿ ಹೇಳಿದ ಸಮಯಕ್ಕಿನ್ನೂ ಹತ್ತು ನಿಮಿಷ ಬಾಕಿಯಿತ್ತು. ಹುಡುಗ ಪಂಕ್ಚುವಲ್ ಆಗಿದ್ದಾನೆ ಅಂದುಕೊಳ್ಳಲೆಂದೇ ಬೇಗ ಬಂದಿದ್ದೆ. ಅಪರೂಪಕ್ಕೆ ಹಾಕಿಕೊಂಡ ಶೂ ಕಾಲಿಗೆ ಕಚ್ಚುತ್ತಿತ್ತು. ಸದಾ ದೊಗಲೆ ಅಂಗಿ ತೊಡುತ್ತಿದ್ದವನಿಗೆ ಇಂದು ಬೇಕೆಂದೇ ಐರನ್ ಮಾಡಿದ ಫಾರ್ಮಲ್ ಶರ್ಟನ್ನು ಬದಿಗಿಟ್ಟು ತೊಟ್ಟ ಟೈಟ್ ಟೀ ಶರ್ಟ್‌ನ ಬಿಗಿಯಪ್ಪುಗೆ ಕಿರಿಕಿರಿಯನ್ನುಂಟುಮಾಡುತ್ತಿತ್ತು. ಕೊಂಚ ಬೆನ್ನು ಬಗ್ಗಿಸಿ ಕೂರುವ ಎಂದಿನ ಶೈಲಿಯನ್ನು ಮರೆಮಾಚಿ ನೆಟ್ಟಗೆ ಕೂತ ಭಂಗಿ ಬೆನ್ನಿಗೆ ನೋವನ್ನುಂಟುಮಾಡುತ್ತಿತ್ತು. ಕಾನ್ಫಿಡೆನ್ಸ್ ತುಂಬಿದ ಮುಗುಳ್ನಗುವೊಂದನ್ನು ಮುಖದ ಮೇಲೆ ಜಾರಿಯಲ್ಲಿಡಲು ಪ್ರಯತ್ನಿಸುತ್ತಾ ಕುಳಿತಿದ್ದೆ. ಹೀಗೆ ನನ್ನದಲ್ಲದ ಈ ರೀತಿನೀತಿ, ಅಂಗಭಂಗಿಗಳ ತೊಟ್ಟು ಕುಳಿತಿರುವ ನಾನು ಯಾವುದೋ ವೇಷ ತೊಟ್ಟಿರುವಂತೆ ಭಾಸವಾಗುತ್ತಿತ್ತು.

ಸುಮಾಳ ವಿಷಯದಲ್ಲಾದಂತೆ ಇಲ್ಲೂ ಆಗಬಾರದು.

ನನಗೆ ನಾನೇ ಹೇಳಿಕೊಂಡೆ. ನನ್ನನ್ನು ನೋಡಿದೊಡನೆ ವೈಶಾಲಿಗೆ ನಿರಾಸೆಯಾಗಬಾರದು. ತಾನು ಫೋಟೊ ನೋಡಿ ಕಲ್ಪಿಸಿಕೊಂಡ ಸಾತ್ವಿಕನಿಗೂ ಈಗ ತನ್ನೆದುರು ಕುಳಿತಿರುವ ಸಾತ್ವಿಕನಿಗೂ ಅಜಗಜಾಂತರವಿದೆ ಎಂದವಳಿಗನಿಸಬಾರದು. ಚೆನ್ನಾಗಿ ಮಾತನಾಡಬೇಕು. ಅವಳನ್ನು ಬಾಯ್ತುಂಬಾ ನಗಿಸಬೇಕು. ನನ್ನೊಡನಿರುವ ಒಂದು ಕ್ಷಣವೂ ಅವಳಿಗೆ ಬೇಸರವಾಗದಂತೆ ಲವಲವಿಕೆಯಿಂದ ನಡೆದುಕೊಳ್ಳಬೇಕು. ಹಾಗೆಂದುಕೊಂಡೇ ಈ ನನ್ನದಲ್ಲದ ವೇಷವನ್ನು ಧರಿಸಿಬಂದಿದ್ದೆ. ಆಫ್ಟರಾಲ್ ಬದುಕೆಂದರೆ, ಪ್ರೀತಿಯೆಂದರೆ ನಮ್ಮೊಡನಿರುವವರಿಗೆ ತಕ್ಕಂತೆ ನಾವು ಹೊಂದಿಕೊಳ್ಳುವುದೇ ತಾನೇ?

ನಾನು ಯೋಚನೆಗಳೊಳಗೆ ಕಳೆದುಹೋಗಿದ್ದಾಗಲೇ ತಿಳಿನೀಲಿ ಚೂಡಿದಾರ ತೊಟ್ಟ ರೂಪರಾಶಿಯೊಂದು ರೆಸ್ಟೋರೆಂಟಿನ ಬಾಗಿಲಿನಲ್ಲಿ ಪ್ರತ್ಯಕ್ಷವಾಯಿತು. ವೈಶಾಲಿ! ಅರೆಕ್ಷಣ ಹೃದಯದೊಳಗೆ ವಿದ್ಯುತ್ ಹರಿದಂತಾಗಿ ಎದ್ದುನಿಂತುಕೊಂಡೆ. ಆಕಾಶದ ನೀಲಿಯಲ್ಲಿ ಅದ್ದಿ ತೆಗೆದಂತಿದ್ದ ದುಪಟ್ಟಾವನ್ನು ಸರಪಡಿಸಿಕೊಳ್ಳುತ್ತಾ ರೆಸ್ಟೋರೆಂಟಿನೊಳಗೆ ನೋಡಿದಳು ವೈಶಾಲಿ. ಮುಖದಲ್ಲಿನ ಉದ್ವೇಗವನ್ನು ನಿಯಂತ್ರಿಸಿಕೊಳ್ಳಲೆತ್ನಿಸುತ್ತಾ ಅವಳತ್ತ ಕೈ ಮಾಡಿದೆ. ಅವಳು